**ಓ.ಎಸ್.ನಂ. 697/2019**

**ಡಿ.ಡಬ್ಲ್ಯೂ:3**

ದಿನಾಂಕಃ 05-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಬಿ ಆರ್ ವಾದಿ ಪರ ವಕೀಲರಿಂದಃ-**

ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ತಾಲೂಕು ಕಚೇರಿಯಲ್ಲಿ ದಿನಗೂಲಿ ಕೆಲಸ ಮಾಡುತ್ತೇನೆ. ತಾಲೂಕು ಕಚೇರಿಯಲ್ಲಿ ಬಂದ ಜನರಿಗೆ ದಾಖಲಾತಿಗಳನ್ನು ತೆಗೆದುಕೊಡುವಂತ ಕೆಲಸವನ್ನು ಮಾಡುತ್ತೇನೆ. ಅದಕ್ಕೆ ನಾನು ಅವರಿಂದ ಹಣವನ್ನು ಪಡೆಯುತ್ತೇನೆ. ಅದನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ಕೆಲಸವನ್ನು ಮಾಡುವುದಿಲ್ಲ. ನನಗೆ ಈಗ 62 ವರ್ಷ ವಯಸ್ಸಾಗಿದೆ. ನಾನುನ್ಯಾಯಾಲಯಕ್ಕೆ ಹಾಜರುಪಡಿಸಿದ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಪ್ರಮಾಣಪತ್ರದಲ್ಲಿರುವ ವಿಷಯಗಳನ್ನು ನನ್ನ ಸ್ನೇಹಿತನಾದ ಚಂದ್ರಪ್ಪ ಹೇಳಿ ಬರೆಸಿರುತ್ತಾನೆ. ಸದರಿ ನನ್ನ ಪ್ರಮಾಣಪತ್ರದಲ್ಲಿ ನನಗೆ ಎಷ್ಟು ವರ್ಷ, ನಾನು ಯಾವ ಕೆಲಸ ಮಾಡುತ್ತೇನೆಂದು ಬರೆಸಿರುತ್ತಾನೆಂದು ನಾನು ನೋಡಿರುವುದಿಲ್ಲ. 1 ನೇ ಪ್ರತಿವಾದಿ ನನಗೆ ಸಂಬಂಧಿಯಾಗಬೇಕು. ನಾನು ದಿಃ 10-12-2020 ರಂದು 1 ನೇ ಪ್ರತಿವಾದಿಗೆ ಹಣವನ್ನು ನೀಡಿರುತ್ತೇನೆ. ಸದರಿ ವಿಚಾರದ ಬಗ್ಗೆ ನಾನು 1 ನೇ ಪ್ರತಿವಾದಿಗೆ ನೋಟೀಸನ್ನು ನೀಡಿರುವುದಿಲ್ಲ. ಇದುವರೆಗೂ ನಾನು 1 ನೇ ಪ್ರತಿವಾದಿಗೆ ನೋಟೀಸನ್ನು ನೀಡಿರುವುದಿಲ್ಲ. ನಾನು ಕೊಟ್ಟ ಹಣವನ್ನು ಸಹ ಹಿಂತಿರುಗಿಸಿ ಕೊಡುವಂತೆ 1 ನೇ ಪ್ರತಿವಾದಿಯನ್ನು ನಾನು ಕೇಳಲು ಸಹ ಹೋಗಿರುವುದಿಲ್ಲ. ನಾನು ನನ್ನ ಪ್ರಮಾಣಪತ್ರದಲ್ಲಿ ದಿಃ 03-11-2020 ರಲ್ಲಿ 1 ನೇ ಪ್ರತಿವಾದಿಗೆ ಹಾಗೂ ವಾದಿಯ ತಂದೆಗೆ ನೋಟೀಸು ನೀಡಿದ ಬಗ್ಗೆ ನಾನು ನಮೂದಿಸಿರುವುದಿಲ್ಲ. ನನ್ನ ಪ್ರಮಾಣಪತ್ರದಲ್ಲಿ ದಿಃ 10-12-2020 ರಲ್ಲಿ ಹಣವನ್ನು ನೀಡಿರುವುದಾಗಿ ತಿಳಿಸಿದ್ದು ದಿಃ 03-11-2020 ರಂದು ಹಣವನ್ನು ಹಿಂತಿರುಗಿಸುವಂತೆ ಹಣ ಕೊಡುವ ಮೊದಲೇ ನೋಟೀಸನ್ನು ನೀಡಿರುವುದಾಗಿ ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು ನಾನು ಆ ರೀತಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಮೃತ ರಾಜಪ್ಪನವರಿಗೆ ಯಾವ ಯಾವ ಸ.ನಂ. ಎಷ್ಟೆಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಮೃತ ರಾಜಪ್ಪನವರಿಗೆ ಎಷ್ಟು ಆದಾಯ ಇರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಮೃತ ರಾಜಪ್ಪನವರ ಮನೆಯ ವ್ಯವಹಾರವನ್ನು ಯಾರು ನೋಡಿಕೊಳ್ಳುತಿದ್ದರು ಎಂದು ಸಹ ನನಗೆ ಗೊತ್ತಿಲ್ಲ. ನನ್ನ ಬಳಿ ಬಂದು ರಾಜಪ್ಪ ಮತ್ತು 1 ನೇ ಪ್ರತಿವಾದಿ ಪ್ರತಿವಾದಿ ಬಂದು ಹಣ ಪಡೆದುಕೊಂಡಿರುವುದನ್ನು ಹೊರತಪಡಿಸಿ ಬೇರೆ ಯಾರ ಬಳಿ ಹಣ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹಾಗೂ ರಾಜಪ್ಪನವರು ಬೇರೆ ಯವರ ಬಳಿ ಹಣ ಪಡೆದ ಬಗ್ಗೆ ಬೇರೆ ಯಾವುದೇ ದಾಖಲೆಗೆ ನಾನು ಸಾಕ್ಷಿಯಾಗಿಯೂ ಸಹ ಸಹಿ ಮಾಡಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಗೆ ಸಾಲವಾಗಿ ನೀಡುವ ಮೊದಲು ಆತನಿಗೆ ತೀರುವಳಿ ಮಾಡಲು ಶಕ್ತಿ ಇದೆಯೋ ಇಲ್ಲವೋ ಎಂದು ತಿಳಿದುಕೊಂಡು ಸಾಲವನ್ನು ನೀಡುತ್ತಾರೆ ಎಂದರೆ ಸರಿ. ಅದೇ ರೀತಿ ರಾಜಪ್ಪನವರಿಗೆ ಸಾಲವನ್ನು ಮರುಪಾವತಿ ಮಾಡಲು ಅವರಿಗೆ ಆರ್ಥಿಕ ಸಾಮರ್ಥ್ಯ ಇತ್ತು ಎಂದು

ತಿಳಿದುಕೊಂಡಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ.

ನಿಪಿ-11 ರ ಪ್ರನೋಟನ್ನು 1 ನೇ ಪ್ರತಿವಾದಿ ಮತ್ತು ರಾಜಪ್ಪನವರು 2020 ರ ಡಿಸೆಂಬರ್ ನಲ್ಲಿ ಬರೆದುಕೊಟ್ಟಿದ್ದರು. ನನ್ನ ಆಸ್ತಿಯನ್ನು ಮಾರಾಟ ಮಾಡಿ ಸುಮಾರು 10 ವರ್ಷಗಳಾಗಿದೆ. ತಾಲೂಕು ಕಚೇರಿಯಲ್ಲಿ ಕೆಲಸ ಮಾಡಿ ಅಲ್ಲಿದ್ದ ಜನರು ಕೊಡುವ ಕೆಲಸದಿಂದಲೇ ನನ್ನ ಜೀವನ ಎಂದರೆ ಸರಿ. ಮನೆಯಲ್ಲಿ ನಾನು ಒಬ್ಬನೇ ಇದ್ದೇನೆ. ನಾನು ಹಣವನ್ನು ಮದ್ಯಾಹ್ನ 1-00 ಗಂಟೆ ಸಮಯದಲ್ಲಿ ನಮ್ಮ ಊರಿನಲ್ಲೇ ನೀಡಿರುತ್ತೇನೆ. ನಾನು ಹಣ ಕೊಟ್ಟ 8 ದಿನಗಳ ನಂತರ ನಿಪಿ-11 ರ ದಾಖಲೆಯನ್ನು ತಾಲ್ಲೂಕು ಕಚೇರಿಯಲ್ಲಿ ಮದ್ಯಾಹ್ನ 3-00 ಗಂಟೆಯಲ್ಲಿ ಬರೆಯಲಾಗಿರುತ್ತದೆ. ಸದರಿ ಪತ್ರಕ್ಕೆ ಸಾಕ್ಷಿಯಾಗಿ ಕಲ್ಲೇಶಪ್ಪನ ಬಾಮೈದ ನಾದ ಜಗದೀಶ್ ರವರು ಸಹಿ ಮಾಡಿರುತ್ತಾರೆ. ನಿಪಿ-11 ರ ಪ್ರನೋಟನ್ನು 1 ನೇ ಪ್ರತಿವಾದಿಯೇ ತಂದಿದ್ದರು. ಸದರಿ ನಿಪಿ-11 ರ ದಾಖಲೆಯನ್ನು ಚಿನ್ನರಾಜ್ ಅರಸ್ ರವರು ಬರೆದಿರುತ್ತಾರೆ. ನಿಪಿ-11 ರ ದಾಖಲೆಗೆ ಮತ್ತೊಬ್ಬರು ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನನಗೆ ಬರೆದುಕೊಟ್ಟ ದಾಖಲೆಗೆ ರೂ.5/- ನ ಸ್ಟಾಂಪನ್ನು ಹಾಕಲಾಗಿರುತ್ತದೆ. ರೂ.5/- ನ ಸ್ಟಾಂಪ್ ಪೇಪರ್ ದಾಖಲೆಗೆ ರಾಜಪ್ಪ ಮತ್ತು 1 ನೇ ಪ್ರತಿವಾದಿ ಕಲ್ಲೇಶಪ್ಪ ಸಹಿ ಮಾಡಿರುತ್ತಾರೆ. ರೂ. 5/- ಸ್ಟಾಂಪ್ ಹಚ್ಚಿದ ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗೆ ರಾಜಪ್ಪ ಮತ್ತು 1 ನೇ ಪ್ರತಿವಾದಿ ಕಲ್ಲೇಶಪ್ಪ ಸಹಿ ಮಾಡಿರುವುದಿಲ್ಲ ಮತ್ತು ಅಂತಹ ದಾಖಲೆ ನನ್ನ ಬಳಿ ಇರುವುದಿಲ್ಲ. ನನಗೆ ಬರೆದುಕೊಟ್ಟ ದಾಖಲೆಯು ಯಾವುದೇ ತಿದ್ದುಪಡಿ ಯಾಗಿರುವುದಿಲ್ಲ. ನಿಪಿ-11 ರ ದಾಖಲೆಯು ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ನನ್ನ ಬಳಿ BPL ಕಾರ್ಡ್ ಇರುತ್ತದೆ. 2018 ರಲ್ಲಿ 1 ನೇ ಪ್ರತಿವಾದಿ ತನ್ನ ತಂದೆ ರಾಜಪ್ಪನವರನ್ನು ಊಟ ಹಾಕದೇ ಜಗಳವಾಡಿ ಮನೆಯಿಂದ ಹೊರಗೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ರಾಜಪ್ಪ ನವರು ಪೊಲೀಸರು ದೂರನ್ನು ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ರಾಜಪ್ಪನವರೊಂದಿಗೆ 1 ನೇ ಪ್ರತಿವಾದಿ ಜಗಳವಾಡಿದ ನಂತರ ಅವರ ಹೆಣ್ಣುಮಕ್ಕಳ ಮನೆಯಲ್ಲಿ ವಾಸವಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯನ್ನೇ ಕೇಳಬೇಕು ಎಂದು ನುಡಿಯುತ್ತಾರೆ. ರಾಜಪ್ಪನವರು ವಿಭಾಗ ಕೇಳಿ ದಾವೆ ಕೋರಿರುವ ಬಗ್ಗೆಯೂ ನನಗೆ ಗೊತ್ತಿಲ್ಲ. ನಾನು ಈ ದಿನದಂದು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಹಣವನ್ನು ನೀಡಿದ್ದರಿಂದ ಬಂದಿರುತ್ತೇನೆ. ರಾಜಪ್ಪ ಮತ್ತು 1 ನೇ ಪ್ರತಿವಾದಿಯು ಯಾವ ಭಾಷೆಯಲ್ಲಿ ಸಹಿ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ರಾಜಪ್ಪನವರು ತೀರಿಕೊಂಡು ಸುಮಾರು 2 ವರ್ಷದ ಮೇಲಾಗಿರುತ್ತದೆ. ಯಾವ ವರ್ಷದಲ್ಲಿ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ.

ರಾಜಪ್ಪನವರ ಜೀವಿತಾವಧಿಯಲ್ಲಿ ನಾನು ಹಣವನ್ನು ಹಿಂತಿರುಗಿಸುವಂತೆ ರಾಜಪ್ಪನವರನ್ನು ಕೇಳಿರುವುದಿಲ್ಲ ಮತ್ತು ಅವರ ಊರಿಗೂ ಸಹ ಹೋಗಿರುವುದಿಲ್ಲ. ಹಣವನ್ನು ಸಾಲವಾಗಿ ನೀಡಿದ ನಂತರ ಅದನ್ನು ಎಷ್ಟು

ವರ್ಷದ ವರೆಗೆ ಹಿಂಪಡೆಯಲು ದಾವೆಯನ್ನು ಸಲ್ಲಿಸಬೇಕೆಂದು ನನಗೆ ಗೊತ್ತಿಲ್ಲ. ನಾನು ಇಲ್ಲಿಯವರೆಗೂ ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಮೃತ ರಾಜಪ್ಪ ಮತ್ತು 1 ನೇ ಪ್ರತಿವಾದಿಯ ಮೇಲೆ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ನಿಪಿ-11 ರ ದಾಖಲೆಯಲ್ಲಿ 2 % ಬಡ್ಡಿ ಎಂದು ನಮೂದಿಸಲಾಗಿರುತ್ತದೆ. 2 % ಬಡ್ಡಿ ಎಂದರೆ ಎಷ್ಟು ಎಂದು ನನಗೆ ಗೊತ್ತಿಲ್ಲ. ನಾನು ಸಾಲವಾಗಿ ನೀಡಿದ ಹಣ ನನ್ನ ಬಳಿ ಕರ್ನಾಟಕ ಬ್ಯಾಂಕಿನಲ್ಲಿತ್ತು. ನನ್ನ ಬಳಿ ಕರ್ನಾಟಕ ಬ್ಯಾಂಕಿಲ್ಲಿ ಹಣ ಇದ್ದ ಬಗ್ಗೆ ದಾಖಲೆಯನ್ನು ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಯಾವುದೇ ಹಣವನ್ನು ರಾಜಪ್ಪ ಹಾಗೂ 1 ನೇ ಪ್ರತಿವಾದಿಗೇ ಸಾಲವಾಗಿ ನೀಡಿರುವುದಿಲ್ಲ. ನನಗೆ ಹಣವನ್ನು ಸಾಲವಾಗಿ ನೀಡುವಷ್ಟು ಆರ್ಥಿಕ ಸಾಮರ್ಥ್ಯ ಇರುವುದಿಲ್ಲವೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗು ಆತನ ಬಾಮೈದ ಜಗದೀಶ್ ನೊಂದಿಗೆ ಶರೀಕಾಗಿ ರಾಜಪ್ಪನವರ ಹೆಣ್ಣುಮಕ್ಕಳಿಗೆ ಆಸ್ತಿಯನ್ನು ಕೊಡದಂತೆ ಮಾಡಲು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ರಾಜಪ್ಪ ತೀರಿಕೊಂಡ ಕಾಲಕ್ಕೆ ಅವರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ನಾನು ರಾಜಪ್ಪನವರನ್ನು 2-3 ಬಾರಿ ನೋಡಿರುತ್ತೇನೆ. ನಾನು ರಾಜಪ್ಪನವರನ್ನು ನನ್ನ ಸ್ನೇಹಿತರೊಂದಿಗೆ ಊರಿಗೆ ಹೋದಾಗ ನೋಡಿರುತ್ತೇನೆ. 2018 ರಿಂದ ರಾಜಪ್ಪ ನವರು 1 ನೇ ಪ್ರತಿವಾದಿಯಾಂದಿಗೆ ವಾಸವಿರಲಿಲ್ಲ ಅವರ ಹೆಣ್ಣು ಮಕ್ಕಳೊಂದಿಗೆ ವಾಸವಿದ್ದುದ್ದರಿಂದ ಹಣವನ್ನು ಸಾಲವಾಗಿ ನನ್ನ ಬಳಿ ಕೇಳುವ ಪ್ರಮೇಯವೇ ಇರುವುದಿಲ್ಲ ಹಾಗೂ ನಿಪಿ-11 ರ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(**ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ.ಹೇ.ಕೇ.ಸ.ಇ.ಎ.ಒ.

***Sd/-***
***2 ನೇ.ಹೆ.ಪ್ರ:ದ:ನ್ಯಾ:ದಂ., ರವರು,***
***ಕಡೂರು.***